<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**Spl. C. No. 786/2025**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಬಿ. ಮಲ್ಲೇಶ್ | ಚಾಸಾಃ | ಫ್ರಾಸಾಃ |
| ಗಂಡನ ಹೆಸರು | ಭೀಮರಾವ್ | 7 and 10 | 3 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **10.08.2026.** | |
| ಉದ್ಯೋಗ | ಗಾರೆ ಕೆಲಸ | | |
| ವಾಸ ಸ್ಥಳ | ದೊಮ್ಮರಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ನಿಶಾನೆ.ಪಿ. 2 ಮತ್ತು 6 ರ ಮಹಜರ್ ನಲ್ಲಿ ನನ್ನ ಸಹಿಗಳು ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಬಿ) ಮತ್ತು 6 (ಡಿ) ಎಂದು ಗುರುತಿಸಲಾಯಿತು. 2018 ರಲ್ಲಿ ನಾನು ಮನೆಯಲ್ಲಿ ಇದ್ದಾಗ PC ರವರು ನನ್ನನ್ನು ಕರೆದಿದ್ದು ರವಿ ರವರ ಮನೆಯ ಬಳಿ ಪೊಲೀಸರು ನನ್ನ ಸಹಿಗಳನ್ನು ಪಡೆದುಕೊಂಡರು. ಯಾವ ಕಾರಣಕ್ಕೆ ಮಹಜರ್ ಮಾಡಿದ್ದರು ಎಂದು ಗೊತ್ತಿಲ್ಲ. ನನ್ನ ಜೊತೆಗೆ ಸುಮಾರು ಜನರು ಇದ್ದರು ಎಂದು ಗೊತ್ತಿಲ್ಲ, ಅವರ ಹೆಸರುಗಳು ಗೊತ್ತಿಲ್ಲ. ನಿಶಾನೆ.ಪಿ. 2 ಮತ್ತು 6 ರ ಒಕ್ಕಣೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಗಳನ್ನು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೊಲೀಸರು ಪಿರ್ಯಾದಿಗೆ ಕೊಟ್ಟಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 23.12.2017 ರಂದು ಪೊಲೀಸರು ರವಿ ರವರ ಮನೆಯ ಬಳಿ ಪೊಲೀಸರು ಮಧ್ಯಾಹ್ನ 1.00 ರಿಂದ 1.45 ರವರೆಗೆ ಮಹಜರ್ ಮಾಡಿದ್ದರು ಎಂದರೆ ಸರಿ. ಆ ದಿನ ನನ್ನ ಜೊತೆಗೆ ಮೌಲಾಲಿ ಇದ್ದರು ಎಂದರೆ ಸರಿ. ದಿನಾಂಕ 17.07.2018 ಕ್ಕೆ ಪೊಲೀಸರು ನನ್ನನ್ನು ಮಾದಾನಾಯಕನಹಳ್ಳಿ ಠಾಣೆಗೆ ಮಧ್ಯಾಹ್ನ 11.00 – 12.00 ಕ್ಕೆ ಕರೆಯಿಸಿ ಅಲ್ಲಿ ಪೊಲೀಸರು ಅಮಾನತು ಪಡಿಸಿದ ಒಡವೆಗಳು ಮತ್ತು ಇತರೆ ದಾಖಲಾತಿಗಳನ್ನು ಪಿರ್ಯಾದಿರವರಿಗೆ ನನ್ನ ಸಮಕ್ಷಮ ಮಹಜರ್ ಮೂಲಕ ವಾಪಸ್ಸು ನೀಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.